ಶ್ರೀ ಬಿ. ರಾಚಯ್ಯನವರು.—ಇದು ಜನರಿಗೆ ನೇರವಾಗಿ ತಲಪುತ್ತಿಲ್ಲವೆಂಬುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ತಲಪುತ್ತಿದೆ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು(ಕುಣಿಗಲು).—ತುಮಕೂರು ಜಿಲ್ಲೆಗೆ ಒದಗಿಸಿರುವ ಹಣ ಸಾಲದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಅಭಿಪ್ರಾಯ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಹಣ ಸಾಲದೆಂದು ದೂರು ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಈ ಹಣವನ್ನು ಯಾವ ತಾರೀಖಿನಲ್ಲಿ ಒದಗಿಸಿದ್ದು ?

Sri Kadidal MANJAPPA.—I cannot give the Hon'ble Member the exact date.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಹೋಗಲಿ, ಯಾವ ತಿಂಗಳಲ್ಲಿ ?

Sri Kadidal MANJAPPA.—Not even the month.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಕ್ಷಾಮ ಯಾವ ತಿಂಗಳಿಂದ ಪ್ರಾರಂಭವಾಯಿತು, ಯಾವ ತಿಂಗಳಿಂದ ಹಣವನ್ನೊದಗಿಸಿದರು ?

ಶ್ರೀ ಕಡಿದಾಳ್ ಮಂಜಪ್ಪನವರು.—ಕ್ಷಾಮ ಪ್ರಾರಂಭವಾಗಿಲ್ಲ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಮಧುಗಿರಿ ತಾಲ್ಲೂಕಿನಲ್ಲಿಯೂ ಪಾವಗಡ ತಾಲ್ಲೂಕಿನಲ್ಲಿಯೂ ನೀರಿನ ಅಭಾವ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿದೆ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಆದರೂ ಕೂಡ ನೀರಿನ ಬಾವಿಗಳಿಗೆ ಹಣವನ್ನೊದಗಿಸದೇ ಇರುವುದು ನಿಮ್ಮ ಅಂಕ ಅಂಶಗಳಿಂದ ಕಾಣುತ್ತಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪನವರು.—ಒದಗಿಸಿದ್ದೇವೆ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಕೋರಾರ ಜಿಲ್ಲೆಗೆ ಮಾತ್ರ ಒದಗಿಸಿದ್ದೀರಿ, ತುಮಕೂರು ಜಿಲ್ಲೆಗೆ ಒದಗಿಸದೇ ಇರುವುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇದ್ದೆ ಬೇಕಾದರೆ ತಮಗೆ ಅಂಕ ಅಂಶಗಳನ್ನು ಕೊಡಬಲ್ಲೆ.

ಶ್ರೀ ಆರ್. ಅನಂತರಾವ್ ಅವರು (ಚಾಮರಾಜಪೇಟೆ).—ಗುಬ್ಬಿ ತಾಲ್ಲೂಕಿನಲ್ಲಿ ಏನು ಪರಿಹಾರಗಳನ್ನೊದಗಿಸಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪನವರು.—ಗೋಕಟ್ಟೆಗಳ ನಿರ್ಮಾಣ, ಕೆರೆಗಳ ಕಾಮಗಾರಿಗಳು ಮುಂತಾದ್ದನ್ನೆಲ್ಲಾ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ಶಂಕರಗೌಡರು (ಮಂಡ್ಯ).—ಪ್ರಶ್ನೆಗಳನ್ನು ಕೇಳುವಾಗ ಅನೇಕ ಸಂದರ್ಭಗಳಲ್ಲಿ ಅಧ್ಯಕ್ಷರು ಅನುಮತಿ ಕೊಡುವುದಕ್ಕೆ ಮುಂಚೆಯೇ ಕೇಳಿಬಿಡುತ್ತಾರೆ. ಹೀಗಾಗಿ ನಾನು ಅನೇಕಸಾರಿ ಉಪಪ್ರಶ್ನೆಗಳನ್ನು ಕೇಳಬೇಕೆಂದು ನಿಂತರೂ ನನಗೆ ಅವಕಾಶಸಿಕ್ಕಿಲ್ಲ. ಆದುದರಿಂದ ದಯೆಯಿಟ್ಟು ಅಧ್ಯಕ್ಷರು ಪ್ರಶ್ನೆಕೊಟ್ಟಮೇರೆ ಮಾತನಾಡಬೇಕೆಂದು ಹಾಡಿದರೆ ಒಳ್ಳೆಯದೆಂದು ಸೂಚಿಸುತ್ತೇನೆ.

Mr. SPEAKER.—Have I disappointed the Member at any time?

Sri A. BHEEMAPPA NAIK (Molakalmuru).—Have the Government started any feeding centres anywhere ?

Sri Kadidal MANJAPPA.—No please.

Sri A. BHEEMAPPA NAIK.—Have they started any rice and grain distribution centres anywhere ?

Sri Kadidal MANJAPPA.—Yes.

Sri A. BHEEMAPPA NAIK.—May I know the places where grain centres have been started ?

Sri Kadidal MANJAPPA.—Does the Hon'ble Member mean food depots ?

Sri A. BHEEMAPPA NAIK.—No Sir, just as feeding centres are there, I am asking whether any free grain distribution centres have been started anywhere ?

Sri Kadidal MANJAPPA.—Yes, in Kolar, Doddaballapur taluk and some other taluks also.

Sri A. BHEEMAPPA NAIK.—Are the Government aware that during the year 1945-46 Government started a number of free feeding centres in the distress areas ?

Sri Kadidal MANJAPPA.—Yes.

Sri A. BHEEMAPPA NAIK.—Are not similar conditions prevailing in these distress-stricken parts, Sir ?

Sri Kadidal MANJAPPA.—No Sir.

Sri A. BHEEMAPPA NAIK.—What is the basis on which the Hon'ble Minister says that the conditions are not similar ?

Sri Kadidal MANJAPPA.—The conditions prevailing then and the conditions prevailing now. That is the basis.

Sri A. BHEEMAPPA NAIK.—Does the Hon'ble Minister mean to say that the rainfall during the seasons mentioned and the rainfall now in these areas are similar in these days ?

Sri Kadidal MANJAPPA.—It does dot entirely depend upon rainfall.

Bridge across Yagachi near Settihalli

Q.—129. Sri G. A. THIMMAPPA GOWDA (Arkalgud).—Will the Government be pleased to state :—

(*a*) whether it has come to their notice that the people of Hassan and

Alur taluks are asking for a bridge across 'Yagachi' river near Settihalli, Hassan taluk;

(*b*) whether it is a fact that the Central Government has financed out of Central Road Reserve Funds, the amount required for the construction of the above bridge;

(*c*) whether they have accorded sanction for the construction of this bridge; if not, why?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) No.

(*c*) This bridge and roads connecting it will come under submersion if the proposed Reservoir across the Hemavathi river at Gorur is constructed. The matter is under further investigation as regards the necessity or otherwise for the bridge.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಗೊರೂರು ಬಳಿ ಹೇಮಾವತಿ ನದಿಗೆ ಅಣೆಕಟ್ಟುವ ಯೋಜನೆಯಿದೆಯೆಂದು ಉತ್ತರದಲ್ಲಿ ತಿಳಿಸಿದೆ—ಇದು ಐದು ವರ್ಷದ ಯೋಜನೆಯಲ್ಲಿ ಅಡಕವಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ನಮ್ಮ ಮೈಸೂರು ದೇಶದಲ್ಲಿ ತಗಾಗಲೇ ಅಣೆಕಟ್ಟುಗಳನ್ನು ನಿರ್ಮಾಣ ಮಾಡಬೇಕೆಂದು ಸರ್ಕಾರದವರು ಯೋಜನೆಮಾಡಿ ಅಂದಾಜಾಗಿರತಕ್ಕ ಕೆಲಸಗಳು ಪೂರೈಸಬೇಕಾದರೆ ಇನ್ನೂ 20–30 ವರ್ಷಗಳಾಗಬಹುದಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಆಗಬಹುದು ಅಥವಾ ಆದಕ್ಕೂ ಕದಮೆ ಆಗಬಹುದು

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಹೀಗೆ ಆಲ್ಲೊಂದು ಸೇತುವೆ ಆಗಬೇಕೆಂದು ಇಲ್ಲಗೆ ಸುಮಾರು 30 ವರ್ಷಗಳಿಂದಲೂ ಕೇಳುತ್ತಿದ್ದಾರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಆ ಸ್ಥಳಪರೀಕ್ಷೆ ಮಾಡಿದ್ದಲ್ಲಿ ಅಲ್ಲಿ ಒಂದು ಸೇತುವೆಗೆ ಆಗತ್ಯವಾಗಿ ಆವಶ್ಯಕತೆಯಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಆ ರಿಜರ್ವಾಯರನ್ನು ಕಟ್ಟಿಸದಿದ್ದರೆ, ಈ ಸೇತುವೆಯ ಕೆಲಸವನ್ನು ಜರೂರಾಗಿ ಮಾಡಿಸಬೇಕಾದ್ದು ಆಗತ್ಯವೆಂಬುದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ನಾನಾಗಲೇ ತಮ್ಮ (ಸಿ) ಪ್ರಶ್ನೆಯ ಭಾಗಕ್ಕೆ ಸೂಚಿಸಿರುವ ಉತ್ತರಕ್ಕನುಸಾರವಾಗಿ, ಹೇಮಾವತಿ ರಿಜರ್ವಾಯರ್ ಕಟ್ಟಿಸುವುದಾದರೆ ಈ ಸೇತುವೆಗೆ ಸಂಬಂಧಪಟ್ಟ ರಸ್ತೆ ನೀರು ಮುಳುಗಡೆಯಾಗುತ್ತದೆ. ಆದಕ್ಕಾಗಿ ಏನು ಮಾಡಬಹುದು ಎಂಬುದನ್ನು ಸರ್ಕಾರ ಆಲೋಚಿಸುತ್ತಿದೆ.

ಶ್ರೀ ಕೆ. ಲಕ್ಕಪ್ಪನವರು (ಚನ್ನರಾಯಪಟ್ಟಣ).—ಈ ಸೇತುವೆಗೆ ಸಂಬಂಧಪಟ್ಟ ರಸ್ತೆಗಳು ನೀರು ಮುಳುಗಡೆಯಾಗುತ್ತವೆಯಾದಕಾರಣ, ಈ ಸೇತುವೆಯನ್ನು ಇನ್ನೂ ಸ್ವಲ್ಪ ಮೇಲಿನ ಪ್ರದೇಶದಲ್ಲಿ ಕಟ್ಟಿಸತಕ್ಕ ಆಲೋಚನೆಯೇನಾದರೂ ಇದೆಯೇ?

Mr. SPEAKER.—The Hon'ble Minister has stated that the matter is being investigated further.

ಶ್ರೀ ಕೆ. ಎ. ಬೈರೇಗೌಡರು.—(ಡಿ) ಪ್ರಶ್ನೆಗೆ ಉತ್ತರವಾಗಿ ಮಳೆ ಬೆಳೆಗಳು ಕಾಲಕ್ಕೆ ಸರಿಯಾಗಿ ಬಾರದಿರುವುದೂ ಒಂದು ಕಾರಣವೆಂದು ಹೇಳಿದ್ದೀರಿ ಈ ಉತ್ತರ ನ್ಯಾಯವಾಗಿರುತ್ತದೆಯೆಂದು ತಮ್ಮ ಮನಸ್ಸಿಗೆ ತೋರಿರುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಹಾಗೆ ನ್ಯಾಯವೆಂದು ಮನಸ್ಸಿಗೆ ಕಂಡುಬಂದುದರಿಂದಲೇ ಆ ಉತ್ತರ ಕೊಡರಾಗಿದೆ.

ಶ್ರೀ ಕೆ. ಎ. ಬೈರೇಗೌಡರು.—ಮಳೆ ಬೆಳೆಗಳಾಗದಿರುವುದಕ್ಕೂ, ಈ ಕೆಲಸಗಳು ನಿಧಾನವಾಗುವುದಕ್ಕೂ ಹೇಗೆ ಸಂಬಂಧವಿದೆ? ಹೀಗೆ ಸಂಬಂಧವಿಲ್ಲದ್ದನ್ನು ತಿಳಿಸಲು ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪನವರು.—'Unfavourable Seasonal Conditions' ಎಂದು ಹೇಳಿದೆ.

ಶ್ರೀ ಕೆ. ಎ. ಬೈರೇಗೌಡರು.—ಕೆರೆಗಳು ಜೀರ್ಣೋದ್ಧಾರವಾಗದೆಯಿರುವುದಕ್ಕೂ, ಮಳೆಬೆಳೆಗಳಾಗದಿರುವುದಕ್ಕೂ ಇರುವ ಸಂಬಂಧವೇನು?

ಶ್ರೀ ಕಡಿದಾಳ್ ಮಂಜಪ್ಪನವರು.—ಮಳೆಬಾರದಿದ್ದರೆ ಕೆರೆಗೆ ನೀರು ಬರುವುದಿಲ್ಲ. ತರ್ಜುಮೆಯಲ್ಲಿ ಕನ್ನಡಕ್ಕೆ ಪರಿವರ್ತಿಸಿದಾಗ ಹಾಗೆ ಮಳೆ ಬೆಳೆ ಎಂದು ಹೇಳಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯನವರು (ಬೆಂಗಳೂರು ಉತ್ತ —ಅನುಸೂಚಿತ ಜಾತಿಗಳು).—ಈ ಕೆರೆಗಳ ಜೀರ್ಣೋದ್ಧಾರ ನಿಧಾನವಾಗಲು ಸಿಮೆಂಟ್ ಸಿಕ್ಕದಿರುವುದು ಒಂದು ಕಾರಣವೆಂದು ತಿಳಿಸರಾಗಿದೆ. ಅಂದರೆ ಸಿಮೆಂಟ್ ಸಿಕ್ಕದಿದ್ದರೆ ಅದಕ್ಕೆ ಬದಲಾಗಿ ಮತ್ತೆ ಯಾವುದನ್ನೂ ಉಪಯೋಗಿಸಲು ಆಗುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಕಡೆ ಗಾರೆಯನ್ನೂ ಉಪಯೋಗಿಸುತ್ತಾರೆ. ಆದರೆ ಅದು ಅಷ್ಟು ಸರಿಹೋಗುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯನವರು.—ಕೆಲವುಕಡೆ ಗಾರೆಯನ್ನು ಉಪಯೋಗಿಸಿ ಕಟ್ಟಿರತಕ್ಕ ಕೆರೆಗಳು ಈ ಸಿಮೆಂಟನ್ನು ಉಪಯೋಗಿಸುವ ಕಟ್ಟಡಕ್ಕಿಂತಲೂ ಹೆಚ್ಚು ಬಂದೋಬಸ್ತಾಗಿರುತ್ತದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯನವರು.—ಈಗ ಸಿಮೆಂಟ್ ಮೇಲಿನ ಹತೋಟಿಯನ್ನೆಲ್ಲಾ ತೆಗೆದುಹಾಕರಾಗಿದೆಯಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಂಪೂರ್ಣವಾಗಿನ್ನೂ ತೆಗೆದುಹಾಕಿಲ್ಲ.